ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪರವಾನಗಿ ಭೂಮಾಪಕರುಗಳಿಗೆ ಪ್ರತಿ ಮಾಹೆ 2 ರಿಂದ 25 ರವರೆಗೆ ಸರಾಸರಿ 10 ಪ್ರಕರಣಗಳು ದೊರೆಯುತ್ತಿವೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು

697 (1238) ಶ್ರೀ ಶಿವಶಂಕರ ರೆಡ್ಡಿ ಎನ್.ಎಚ್. (ಗೌರಿಬಿದನೂರು) : ಮಾನ್ಯ ಜವಳಿ, ಯುವಜನಸೇವೆ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಿದ್ದ ಉಡುಪುಗಳ ಸಮುಚ್ಛಯವನ್ನು ಪ್ರಾರಂಭಿಸಲು ಯೋಜಿಸಲಾಗಿರುವುದು ನಿಜವೇ ಆದರೆ, ಇದುವರೆವಿಗೂ ಕಾರ್ಯಾರಂಭ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಗೌರಿಬಿದನೂರಿನಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ಸುಮಾರು 250 ಎಕರೆ ಜಮೀನು ಖರೀದಿಸಲಾಗಿದ್ದು, ಸಿದ್ಧ ಉಡುಪುಗಳ ಸಮುಚ್ಛಯವನ್ನು ಪ್ರಾರಂಭಿಸಲು ಸರ್ಕಾರ ಚಿಂತಿಸಿದೆಯೇ?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವ ಹಾಗೂ ಕ್ರೀಡಾ ಸಚಿವರು) :

ಅ) ಹೌದು.

ಆ) ಈ ರೀತಿಯ ಪ್ರಸ್ತಾವನೆ ಇರುವುದಿಲ್ಲ.

ಮೈಸೂರು ಜಿಲ್ಲೆಯಲ್ಲಿ ಭೂಸ್ವಾಧೀನ

698 (546) ಶ್ರೀ ಶ್ರೀನಿವಾಸ್. ಎಂ (ಮಂಡ್ಯ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಐ.ಎ.ಡಿ.ಬಿ ಯವರು ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿ, ಮೈದನಹಳ್ಳಿ ಇಲವಾಲ ಮತ್ತು ಕೂರ್ಗಹಳ್ಳಿ ಗ್ರಾಮಗಳಲ್ಲಿ ವಶಕ್ಕೆ ತೆಗೆದುಕೊಂಡಿರುವ ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು (ಮಾಹಿತಿ ನೀಡುವುದು)?

ಆ) ಕೈಗಾರಿಕೆಗಳನ್ನು ಪ್ರಾರಂಭಿಸಲು ಎಷ್ಟು ಕಂಪನಿಯವರು ಯಾವ ಉದ್ದೇಶಕ್ಕಾಗಿ ಕೈಗಾರಿಕೆಗಳು ಪ್ರಾರಂಭಿಸಲು ಅರ್ಜಿಗಳನ್ನು ಸಲ್ಲಿಸಿರುತ್ತಾರೆ. (ಕಂಪನಿ ಹೆಸರು ಅದರ ಮಾಲಿಕರ ಹೆಸರುಗಳ ವಿವರ ನೀಡುವುದು)?

ಇ) ಕೆ.ಐ.ಎ.ಡಿ.ಯ ವತಿಯಿಂದ ಕಂಪನಿಗಳಿಗೆ ಜಮೀನನ್ನು ಮಂಜೂರಾತಿ ಮಾಡುವಾಗ ಅನುಸರಿಸುವ ಮಾನದಂಡಗಳೇನು (ಮಾಹಿತಿ ನೀಡುವುದು)?

ಈ) ಪ್ರಸ್ತುತ ಯಾವ ಯಾವ ಕಂಪನಿಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ (ಕಂಪನಿ ಹೆಸರು ಅದರ ಮಾಲೀಕರ ಹೆಸರು ಮತ್ತು ವಿಳಾಸಗಳೊಂದಿಗೆ ಮಾಹಿತಿ ನೀಡುವುದು)?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಕೆ.ಐ.ಎ.ಡಿ ಕಾಯ್ದೆ ಕಲಂ 28(8) ರಂತೆ ಒಟ್ಟು 721-32 ಎಕರೆ ಜಮೀನನ್ನು ಮಂಡಳಿಯ ವಶಕ್ಕೆ ಪಡೆಯಲಾಗಿದೆ. ವಿವರ ಕೆಳಕಂಡಂತಿರುತ್ತದೆ.

ಗ್ರಾಮ	ವಿಸ್ತೀರ್ಣ (ಎ-ಗುಂ)
ಇಲವಾಲ, ಮೈದನಹಳ್ಳಿ	177-16
ಕೂರ್ಗಹಳ್ಳಿ	544-16
ಒಟ್ಟು	721-32

ಆ) ಕೈಗಾರಿಕೆಗಳನ್ನು ಪ್ರಾರಂಭಿಸಲು 428 ಕೈಗಾರಿಕೋದ್ಯಮಿಗಳು ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆ, ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆ ಹಾಗೂ ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಗಳಲ್ಲಿ ಕೈಗಾರಿಕಾ ನಿವೇಶನ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಜಿಲ್ಲಾಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಗೆ 172 + 183 + 35 = 390 ಅರ್ಜಿಗಳು ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಗೆ 34 ಅರ್ಜಿಗಳು, ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಗೆ 4 ಅರ್ಜಿಗಳು ಸೇರಿ ಒಟ್ಟು 428 ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಕಂಪನಿಯ ಹೆಸರು ಹಾಗೂ ಮಾಲೀಕರ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.

ಇ) ಕೆ.ಐ.ಎ.ಡಿ.ಬಿ.ಯ ಯಿಂದ ಕಂಪನಿಗಳಿಗೆ ಜಮೀನನ್ನು ಮಂಜೂರು ಮಾಡುವಾಗ ಈ ಕೆಳಕಂಡ ಸಮಿತಿ ಸಭೆಗಳಲ್ಲಿ ಅನುಮೋದನೆ ಯಾದಂತಹ ಕೈಗಾರಿಕೆಗಳಿಗೆ ಜಮೀನು ಹಂಚಿಕೆ ಮಾಡಲಾಗುವುದು ಹಾಗೂ ಕೈಗಾರಿಕೋದ್ಯಮಿಗಳಿಗೆ ನಿವೇಶನ ಹಂಚಿಕೆ ಮಾಡುವಾಗ ಅನುಸರಿಸಬೇಕಾದ ಮಾನದಂಡಗಳ ಬಗ್ಗೆ ಅನುಬಂಧ–2 ಲಗತ್ತಿಸಿದೆ.

1. ರಾಜ್ಯ ಉನ್ನತ ಮಟ್ಟದ ಅಧಿಕಾರಯುತ ಸಮಿತಿ ಸಭೆ
2. ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ,
3. ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ, ಹಾಗೂ
4. ಮಂಡಳಿಯ ಹಂಚಿಕೆ ಸಮಿತಿ ಸಭೆ ನಿರ್ಣಯದನ್ವಯ ಜಮೀನನ್ನು ಕೈಗಾರಿಕಾ ಘಟಕಗಳಿಗೆ ಹಂಚಿಕೆ ಮಾಡಲಾಗುವುದು.

ಈ) ಪ್ರಸ್ತುತ ಸದರಿ ಪ್ರದೇಶದಲ್ಲಿ ಹಂಚಿಕೆ ಮಾಡಲಾದ ಕಂಪನಿಗಳ ಮಾಲೀಕರು ಹಾಗೂ ಅವರ ಹೆಸರು ವಿಳಾಸಗಳನ್ನು ಅನುಬಂಧ–3 ರಲ್ಲಿ ಲಗತ್ತಿಸಲಾಗಿದೆ.

ಗುಲ್ಬರ್ಗಾ ಜಿಲ್ಲೆ ಶಿಕ್ಷಣ ಇಲಾಖೆಗೆ ಬಿಡುಗಡೆ ಮಾಡಿರುವ ಅನುದಾನ

701 (1222) ಶ್ರೀ ಸುಭಾಷ್ ಆರ್. ಗುತ್ತೇದಾರ್ (ಅಳಂದ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಡಾ॥ ನಂಜುಂಡಪ್ಪ ವರದಿಯನ್ವಯ ಗುಲ್ಬರ್ಗಾ ಜಿಲ್ಲೆಯ ಶಿಕ್ಷಣ ಇಲಾಖೆಗೆ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಈ ಅನುದಾನದಿಂದ ಶಿಕ್ಷಣ ಇಲಾಖೆಯಲ್ಲಿ ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ (ವಿವರ ನೀಡುವುದು);

ಇ) ಗುಲ್ಬರ್ಗಾ ಜಿಲ್ಲೆಯಲ್ಲಿ ಶಿಕ್ಷಣವನ್ನು ಉತ್ತೇಜಿಸಲು ಸರ್ಕಾರ ಇನ್ನು ಹೆಚ್ಚಿನ ಅನುದಾನವನ್ನು ನೀಡಲು ಕ್ರಮಕೈಗೊಳ್ಳುವುದೇ?